**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 3/2010**

**ದೋ.ಸಾ. :89 ಪ್ರಾ.ಸಾ. : 53**

ಸಾಕ್ಷಿಯ ಹೆಸರು : ಕಾಮಾಕ್ಷಿ ಬಂಗಾರಯ್ಯ ನಾಯಕ್

ಗಂಡನ ಹೆಸರು : ಬಂಗಾರಯ್ಯ ನಾಯಕ್

ವಯಸ್ಸು : 60 ವರ್ಷಕ್ಕೆ ಮೇಲೆ ಇರಬಹುದು ಸರಿಯಾಗಿ ಗೊತ್ತಿಲ್ಲ.

ಉದ್ಯೋಗ : ಗೃಹಿಣಿ.

ವಾಸ : ಕಾನಗೋಡು, ಸಿದ್ದಾಪುರ.

**ದಿನಾಂಕಃ 05-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ಕಾನಗೋಡು ಗ್ರಾಮದಲ್ಲಿ ಮದುವೆ ಆದಾಗಿನಿಂದ ವಾಸ ಇದ್ದೇನೆ. ನನಗೆ ಮದುವೆ ಆಗಿ 50 ವರ್ಷಕ್ಕೆ ಮೇಲೆ ಆಗಿದೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯ ಪರಿಚಯ ನನಗೆ ಇದೆ. ಕಾರಣ ಆರೋಪಿ ನಮ್ಮ ಊರಿನವನು. ಆರೋಪಿ ಕಾನಗೋಡು ಗ್ರಾಮ ಪಂಚಾಯತಿಯ ಅಧ್ಯಕ್ಷ ಆಗಿದ್ದ ವಿಚಾರ ನನಗೆ ಗೊತ್ತು. 2001-02 ರಲ್ಲಿ ಸರ್ಕಾರ ಸ್ವಚ್ಛ ಗ್ರಾಮ ಯೋಜನೆ ಅಡಿಯಲ್ಲಿ ನಮ್ಮ ಗ್ರಾಮಕ್ಕೆ ಶೌಚಾಲಯ ನಿರ್ಮಿಸಿಕೊಳ್ಳಲು ರೂ.20 ಲಕ್ಷ ಅನುದಾನ ನೀಡಿದ ಬಗ್ಗೆ ನನಗೆ ಗೊತ್ತಿಲ್ಲ. ಅದರಲ್ಲಿ 210 ಫಲಾನುಭವಿಗಳು ಆಯ್ಕೆ ಆಗಿದ್ದರು ಮತ್ತು ಅದರಲ್ಲಿ ನನ್ನ ಹೆಸರು ಇತ್ತು ಮತ್ತು ಪ್ರತಿ ಫಲಾನುಭವಿಗಳಿಗೆ ರೂ.3000/- ಸಹಾಯಧನ ನೀಡಬೇಕಿತ್ತು ಎನ್ನುವದು ನನಗೆ ಗೊತ್ತಿಲ್ಲ. ನನಗೆ ರೂ.3000/- ಸಹಾಯಧನವನ್ನು ಗ್ರಾಮ ಪಂಚಾಯತಿಯಿಂದ ಕೊಟ್ಟಿಲ್ಲ. ಶೌಚಾಲಯವನ್ನು ನನ್ನ ಮನೆಗೆ 3 ವರ್ಷದ ಹಿಂದೆ ನಿರ್ಮಾಣ ಮಾಡಿಕೊಂಡಿದ್ದೇನೆ, ಅದಕ್ಕೆ ನಾನೇ ಹಣ ಖರ್ಚು ಮಾಡಿದ್ದೇನೆ. ಪಂಚಾಯತಿಯವರು ರೂ.12000/- ಅನ್ನು ಶೌಚಾಲಯ ನಿರ್ಮಾಣ ಮಾಡಿಕೊಳ್ಳಲು 3-4 ವರ್ಷಗಳ ಹಿಂದೆ ಕೊಟ್ಟಿದ್ದಾರೆ. ಅದಕ್ಕೆ ಪೂರ್ವದಲ್ಲಿ ಶೌಚಾಲಯ ನಿರ್ಮಾಣ ಮಾಡಿಕೊಳ್ಳಲು ಯಾವುದೇ ಹಣವನ್ನು ಪಂಚಾಯತಿಯಿಂದ ಕೊಟ್ಟಿಲ್ಲ. ಪೊಲೀಸನವರು ನನ್ನನ್ನು ಈ ಪ್ರಕರಣದಲ್ಲಿ ವಿಚಾರಣೆ ಮಾಡಿಲ್ಲ.

**ಪಾಟೀ ಸವಾಲುಃ ಆರೋಪಿತರ ವಕೀಲರಾದ ಶ್ರೀ ಜಿ ಟಿ ಎನ್ ರವರಿಂದಃ-**

2. ನನ್ನ ಗಂಡ ಮೃತಪಟ್ಟಿದ್ದಾರೆ. ನನ್ನ ಗಂಡ ಮೃತಪಟ್ಟು 20 ವರ್ಷದ ಮೇಲೆ ಆಗಿದೆ. ನನ್ನ ಗಂಡ ಇದ್ದಾಗ ಅವರೇ ಮನೆಯ ಯಜಮಾನಿಕೆ ಮಾಡುತ್ತಿದ್ದರು. 2001-02 ರಲ್ಲಿ ಶೌಚಾಲಯ ನಿರ್ಮಾಣದ ಬಗ್ಗೆ ಗ್ರಾಮ ಪಂಚಾಯತಿ ಸಹಾಯಧನ ನೀಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಅದು ನನ್ನ ಗಂಡನಿಗೆ ಗೊತ್ತಿದೆ ಎಂದರೆ ಇರಬಹುದು. ನಾನು 3-4 ವರ್ಷದ ಹಿಂದೆ ಹಳೆ ಮನೆ ತೆಗೆದು ಹೊಸ ಮನೆ ನಿರ್ಮಾಣ ಮಾಡಿರುತ್ತೇನೆ. 2001-02 ರಲ್ಲಿ ನನ್ನ ಗಂಡ ಗ್ರಾಮ ಪಂಚಾಯತಿಯಿಂದ ಸಹಾಯಧನ ಪಡೆದು ಶೌಚಾಲಯ ನಿರ್ಮಾಣ ಮಾಡಿಕೊಂಡಿರುವುದು ಗೊತ್ತಿದ್ದರೂ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ